ಬಿ) ಕಾಕಂಬಿ ಗುಣದ ಅಂಶವನ್ನು ಹೆಚ್ಚಿಸುವುದು ಹಾಗೂ ಕಾಕಂಬಿ ಮತ್ತು ರೆಕ್ಟಿಫೈಡ್ ಸ್ಪಿರಿಟನ್ನು ಸಾರಾಯಿ ಮತ್ತು ಐಎಂಎಲ್‌ಗೆ ಪರಿವರ್ತಿಸಿ ರಫ್ತು ಮಾಡುವ ಮೂಲಕ ಅಬ್ಕಾರಿ ಆದಾಯ ಹೆಚ್ಚಿಸುವುದು.

90. ಐ.ಎಂ.ಎಲ್. ಮೇಲಿನ ರಫ್ತು ಶುಲ್ಕವನ್ನು ಪ್ರತಿ ಬಲ್ಕ್ ಲೀಟರಿಗೆ 1 ರೂಪಾಯಿಯಿಂದ 20ರೂಪಾಯಿಗಳಿಗೆ ಗಣನೀಯವಾಗಿ ಹೆಚ್ಚಿಸಲಾಗಿದೆ. ಈ ಕ್ರಮದಿಂದಾಗಿ ವರ್ಷದಲ್ಲಿ 38 ಕೋಟಿ ರೂಪಾಯಿ ಉತ್ಪತ್ತಿಯಾಗುವುದೆಂಬ ಮತ್ತು ನಾನ್-ಡ್ಯೂಟಿ ಪೇಡ್ ಲಿಕ್ಕರಿನ ಹೊಣೆಯನ್ನು ತಡೆಯುತ್ತದೆಂಬ ನಿರೀಕ್ಷೆಯಿತ್ತು. ಈಗ, 1990-91ರಲ್ಲಿ ಕೇವಲ 6.90 ಕೋಟಿ ರೂಪಾಯಿ ಉತ್ಪತ್ತಿಯನ್ನು ಮಾತ್ರ ನಿರೀಕ್ಷಿಸಲಾಗಿದೆ. ರಫ್ತು ಶುಲ್ಕದಿಂದ ಬರುವುದೆಂದು ನಿರೀಕ್ಷಿಸಿದ್ದ ಆದಾಯದ ಅಂದಾಜನ್ನು ವಾಸ್ತವಿಕ ಆಧಾರದ ಮೇಲೆ ಮಾಡಿರಲಿಲ್ಲ. ಕಳೆದ ವರ್ಷದಲ್ಲಿ ಬಂದಿದ್ದ ಮೊತ್ತಕ್ಕಿಂತ ಈಗ ಪ್ರಾಪ್ತವಾಗುವುದೆಂದು ನಿರೀಕ್ಷಿಸಿರುವ 6.90 ಕೋಟಿ ರೂಪಾಯಿ ಮೊತ್ತಕ್ಕೆ ರಫ್ತು ಶುಲ್ಕದ ದರದಲ್ಲಿ ಹೆಚ್ಚಳ ಮಾಡಿರುವುದೇ ಕಾರಣ. ಆದರೆ, ನಮ್ಮ ರಫ್ತುಗಳಿಗೆ ಸ್ಪರ್ಧಾತ್ಮಕ ಬೆಲೆ ಇರದ ಕಾರಣ ರಫ್ತಿನ ಪ್ರಮಾಣದಲ್ಲಿ ಇಳಿತ ಉಂಟಾಗಿದೆ. ಇದು ಮುಂದುವರಿದಲ್ಲಿ ಐಎಂಎಲ್ ಉತ್ಪಾದನೆಯು ಕುಂಠಿತಗೊಂಡು ಅದು ಉದ್ಯೋಗ ಮುಂತಾದವುಗಳ ಮೇಲೆ ವ್ಯಾಪಕ ಪರಿಣಾಮ ಬೀರುತ್ತದೆ. ರಫ್ತು ಶುಲ್ಕದ ಬಗ್ಗೆ ಕಳೆದ ಅಧಿವೇಶನದಲ್ಲಿ ವಿರೋಧ ಪಕ್ಷದ ಸದಸ್ಯರು ವ್ಯಕ್ತಪಡಿಸಿದ ಕಳಕಳಿಯನ್ನು ನಾನು ಗಮನಿಸಿದ್ದೇನೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿ ಲಿಕ್ಕರಿನ ಚಲನವಲನಕ್ಕೆ ಸಂಬಂಧಿಸಿದಂತೆ ಕೆಲವು ಷರತ್ತುಗಳನ್ನು ವಿಧಿಸಿದನಂತರ ಮತ್ತು ನಿರ್ದಿಷ್ಟ ಘೋಷಣಾ ಪತ್ರ ತೆಗೆದುಕೊಂಡು ನಂತರ, ರಫ್ತು ಶುಲ್ಕವನ್ನು 2 ರೂಪಾಯಿಗೆ ನಿಗದಿಪಡಿಸಲು ನಾನು ನಿರ್ಧರಿಸಿದ್ದೇನೆ. ನಾನ್ ಡ್ಯೂಟಿ ಪೇಡ್ ಲಿಕ್ಕರ್ ವಿರುದ್ಧದ ಆಂದೋಲನವನ್ನು , ಅದು ಈಗಿರುವಂತೆಯೇ ಮುಂದುವರಿಸಿಕೊಂಡು ಹೋಗಲು ಅಬ್ಕಾರಿ ಇಲಾಖೆಯ ಜಾರಿ ಯಂತ್ರಾಂಗವನ್ನು ಗಣನೀಯವಾಗಿ ಬಲಪಡಿಸಲಾಗುವುದು.

ಶ್ರೀ ವಾಟಾಳ್ ನಾಗರಾಜ್ : ಇದು ಪಾಪದ ಕೆಲಸ ಪಾಪದ ಕೆಲಸ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಆಡಳಿತ ಪಕ್ಷದವರು ವಿರೋಧಪಕ್ಷದ ಮುಖಕ್ಕೆ ಮಸಿ ಬಳಿಯುವಂತಹ ಕೆಲಸ.

ಶ್ರೀ ಸಿ. ಬೈರೇಗೌಡ : ಈ ರೀತಿ ಹೇಳತಕ್ಕಂಥಾದ್ದು ಅನ್ಯಾಯ. ಎಲ್ಲಾ ವಿರೋಧ ಪಕ್ಷದ ಸದಸ್ಯರನ್ನೂ ಸೇರಿಸಿಕೊಂಡು ಹೇಳತಕ್ಕಂಥಾದ್ದು ಅನ್ಯಾಯ.

ಶ್ರೀ ವಾಟಾಳ್ ನಾಗರಾಜ್ : ವಿರೋಧ ಪಕ್ಷದಲ್ಲಿ ನಾವು ಸೇರಿಲ್ಲ. ವಿರೋಧ ಪಕ್ಷ ಎಂದಾಗ ಯಾರು ಎಂಬುದನ್ನು ಹೇಳಬೇಕು. ನಾವು ಯಾರೂ ಇದನ್ನು ಹೇಳಿಲ್ಲ. ಈ ಅನ್ಯಾಯಕ್ಕೆ ನಾವು ಭಾಗಿಗಳಲ್ಲ. ಇದು ತಿದ್ದುಪಡಿಯಾಗಬೇಕು.

ಶ್ರೀ ಸಿ. ಬೈರೇಗೌಡ : ಕೆಲವು ವಿರೋಧ ಪಕ್ಷದ ಸದಸ್ಯರು ಎಂದು,ಬೇಕಾದರೆ ಹೇಳಲಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನು ಇದನ್ನು ವಿರೋಧ ಮಾಡಿ ಸಭೆಯಿಂದ ಹೊರಗಡೆ ಹೋಗುತ್ತಿದ್ದೇನೆ.

(ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ : ಇದನ್ನು ಬೇಕಾದರೆ ಕೆಲವು ವಿರೋಧ ಪಕ್ಷದ ಸದಸ್ಯರು ಎಂದು ಹೇಳಲಿ. ಎಲ್ಲರಿಗೂ ಹೇಳತಕ್ಕದ್ದು ಸರಿಯಲ್ಲ.